## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 556
**ಸದಸ್ಯರ ಹೆಸರು** : ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
**ಉತ್ತರಿಸುವ ದಿನಾಂಕ** : 11.12.2025
**ಉತ್ತರಿಸುವ ಸಚಿವರು** : ಮಾನ್ಯ ಉಪಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆಯಲ್ಲಿ ವಾರಾಹಿ ನದಿ ಯೋಜನೆಯ ಮೂಲ ಉದ್ದೇಶವೇನು: ಆ ಉದ್ದೇಶವನ್ನು ಈಡೇರಿಸುವ ರೀತಿಯಲ್ಲಿ ಪ್ರಸ್ತುತ ಯೋಜನೆ ಮುಂದುವರಿದಿದೆಯೇ? | ಕರ್ನಾಟಕ ವಿದ್ಯುತ್ ನಿಗಮದ ಹೊಸಂಗಡಿಯ ಭೂಗರ್ಭ ಜಲ ವಿದ್ಯುತ್ ಶಕ್ತಿ ಉತ್ಪಾದನಾ ಕೇಂದ್ರದಿಂದ ವಿದ್ಯುತ್ ಉತ್ಪಾದನೆ ಬಳಿಕ ಲಭ್ಯವಾಗುವ 1100 ಕ್ಯೂಸೆಕ್ಸ್ ನೀರನ್ನು ಬಳಸಿಕೊಂಡು ಸುಮಾರು 16 ಕಿ.ಮೀ ದೂರದಲ್ಲಿ ಇರುವ ಹೋರಿಯಬ್ಬೆ ಎಂಬಲ್ಲಿ ವಿಯರ್ ನಿರ್ಮಿಸಿ, ಕುಂದಾಪುರ ತಾಲೂಕಿನ 33 ಗ್ರಾಮಗಳು ಹಾಗೂ ಉಡುಪಿ ತಾಲೂಕಿನ 35 ಗ್ರಾಮಗಳ ಒಟ್ಟು ಸುಮಾರು 15,702 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಉದ್ದೇಶದೊಂದಿಗೆ ವಾರಾಹಿ ನೀರಾವರಿ ಯೋಜನೆಯನ್ನು ರೂಪಿಸಲಾಗಿದೆ.<br><br>ಸದರಿ ಯೋಜನೆಯ ರೂ.9.43 ಕೋಟಿ ಅಂದಾಜು ಮೊತ್ತಕ್ಕೆ ದಿನಾಂಕ:27.03.1979ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಮೂಲ ಯೋಜನೆಯ ವ್ಯಾಪ್ತಿಯ ಪ್ರದೇಶಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br><br>1980ರಿಂದ 2001ರ ಮಧ್ಯದಲ್ಲಿ ವಾರಾಹಿ ಯೋಜನೆಯಡಿ ಪ್ರಸ್ತಾಪಿತ ಅಣೆಕಟ್ಟೆಯ ಎತ್ತರವನ್ನು ಹೆಚ್ಚಿಸಿ, ವಿದ್ಯುತ್ ಉತ್ಪಾದನೆ ಮಾಡುವ ಸಂಬಂಧ ಯೋಜನೆಯನ್ನು ರೂಪಿಸಲು ಹಾಗೂ ಅಗತ್ಯವಿರುವ ಅರಣ್ಯ ಬಿಡುಗಡೆ ಕುರಿತು ನೀರಾವರಿ ಇಲಾಖೆ, ಕರ್ನಾಟಕ ವಿದ್ಯುತ್ ನಿಗಮ, ಅರಣ್ಯ ಇಲಾಖೆಗಳ ವಿವಿಧ ಹಂತಗಳಲ್ಲಿ ಚರ್ಚೆಯಾಗಿರುತ್ತದೆ.<br><br>ಅರಣ್ಯ ಪ್ರದೇಶವನ್ನು ಮಿತಿಗೊಳಿಸಿ, ಯೋಜನೆಯನ್ನು ರೂಪಿಸಲು ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆ ಹಾಗೂ ನವೆಂಬರ್ 2000ರಲ್ಲಿ ಯೋಜನಾ ಪ್ರದೇಶಕ್ಕೆ ಭೇಟಿ ನೀಡಿದ ಕೇಂದ್ರ ಅರಣ್ಯ ಸಲಹಾ ಸಮಿತಿಯ ಶಿಫಾರಸ್ಸಿನಂತೆ, ವಿದ್ಯುತ್ ಉತ್ಪಾದನೆ ಉದ್ದೇಶವನ್ನು ಕೈಬಿಟ್ಟು, ಪಿಕ್‌ಅಪ್ ಡ್ಯಾಂ ಬದಲಿಗೆ ಡೈವರ್ಷನ್ ವಿಯರ್ ಅನ್ನು ನಿರ್ಮಿಸಲು ನಿರ್ಧರಿಸಲಾಯಿತು.<br><br>ವಾರಾಹಿ ಡೈವರ್ಶನ್ ವಿಯರ್ ವಿನ್ಯಾಸವನ್ನು ಅಂತಿಮಗೊಳಿಸುವಲ್ಲಿ, ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯಿಂದ ಹಾಗೂ ರಾಜ್ಯ ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಯೊಂದಿಗೆ ಅನುಮತಿ ಪಡೆಯುವಲ್ಲಿ 1979ರಿಂದ 2005ರವರೆಗೆ ಪತ್ರ ವ್ಯವಹಾರ ನಡೆಸಲಾಗಿದ್ದು, ಅಂತಿಮವಾಗಿ, ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯಿಂದ ಮೇ 2005ರಲ್ಲಿ ತೀರುವಳಿ ದೊರೆತಿರುತ್ತದೆ.<br><br>ಸದರಿ ಯೋಜನೆಯಡಿ ಮೂಲ ಯೋಜನೆಯ ಅಚ್ಚುಕಟ್ಟು ವಿಸ್ತೀರ್ಣದಲ್ಲಿ ಯಾವುದೇ ವ್ಯತ್ಯಾಸವಾಗದಂತೆ ಯೋಜನೆಯನ್ನು ಮಾರ್ಪಡಿಸಲಾಗಿದ್ದು, ರೂ.569.53 ಕೋಟಿ ಅಂದಾಜು ಮೊತ್ತದ ಯೋಜನಾ ವರದಿಗೆ ದಿನಾಂಕ:20.03.2006ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>ಸದರಿ ಯೋಜನೆಯು ಪಶ್ಚಿಮ ಘಟ್ಟದ ಕೆಳಭಾಗ ಮತ್ತು ಕರಾವಳಿ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಪ್ರಪ್ರಥಮ ಬೃಹತ್ ನೀರಾವರಿ ಯೋಜನೆಯಾಗಿದ್ದು, ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಹಲವಾರು ತಾಂತ್ರಿಕ ಅಡಚಣೆಗಳು ಎದುರಾಗಿರುತ್ತವೆ. ಪ್ರಸ್ತಾಪಿತ ಯೋಜನೆಯ ಯೋಜಿತ ರೂಪು ರೇಷೆಗೆ ಅನುಗುಣವಾಗಿ ಮತ್ತು ನಿಗದಿತ ನೀರಾವರಿ ಸಾಮರ್ಥ್ಯ ಕಲ್ಪಿಸುವಿಕೆಗೆ |
| ಆ) | ಉಡುಪಿ ಜಿಲ್ಲೆಯಲ್ಲಿ ವಾರಾಹಿ ನದಿ ಯೋಜನೆಯ ವಿಸ್ತೃತ ಯೋಜನಾ ವರದಿ ತಯಾರಿಸಲಾಗಿದೆಯೇ: ಸದರಿ ಯೋಜನೆಯ ಪ್ರಾರಂಭದ ಹಂತದ ಯೋಜನಾ ಅಂದಾಜು ಮೊತ್ತವೆಷ್ಟು: ಈಗ ಅದು ಅಂತಿಮವಾಗಿ ಎಷ್ಟು ಮೊತ್ತಕ್ಕೆ ಪರಿಷ್ಕರಿಸಲಾಗಿದೆ ಮತ್ತು ಮೂಲ ಯೋಜನಾ ಮೊತ್ತಕ್ಕಿಂತ ಎಷ್ಟು ಶೇಕಡಾ ಹೆಚ್ಚಾಗಿದೆ: ಪ್ರಸ್ತುತ ಯೋಜನೆಯ ಶೇಕಡಾ ಎಷ್ಟು ಕೆಲಸ ಮುಗಿದಿದೆ: | |
| ಇ) | ವಾರಾಹಿ ಯೋಜನೆಯ ಮೂಲ ವಿಸ್ತೃತ ಯೋಜನಾ ವರದಿಯನ್ನು ಎಷ್ಟು ಬಾರಿ ಯಾವ ಕಾರಣಕ್ಕಾಗಿ ಬದಲಾಯಿಸಲಾಗಿದೆ: ಮೂಲ ಯೋಜನೆಯ ವ್ಯಾಪ್ತಿಯ ಪ್ರದೇಶಗಳಾವವು: ಅವುಗಳ ವಿಸ್ತೀರ್ಣವೆಷ್ಟು: ಪರಿಷ್ಕರಣೆಗೆ ಕಾರಣವೇನು: | |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಪೂರಕವಾಗಿ ಕಾಲಕಾಲಕ್ಕೆ ತಾಂತ್ರಿಕ ಪರಿಣಿತರ ಸಲಹೆ/ಅಭಿಪ್ರಾಯ ಪಡೆದು, ಸ್ಥಳೀಯ, ತಾಂತ್ರಿಕ ಅವಶ್ಯಕತೆಗನುಗುಣವಾಗಿ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ವಿನ್ಯಾಸದಲ್ಲಿ ಬದಲಾವಣೆ ಮಾಡಿ ನಿರ್ವಹಿಸಲಾಗಿದೆ. ಮುಂದುವರೆದು, ದರಪಟ್ಟಿಯ ಪರಿಷ್ಕರಣೆ, ಹೊಸ ಭೂಸ್ವಾಧೀನ ಕಾಯ್ದೆಯನ್ವಯ ಭೂಪರಿಹಾರದಲ್ಲಿನ ಹೆಚ್ಚಳ, ಇತ್ಯಾದಿ ಕಾರಣಗಳಿಂದಾಗಿ ಯೋಜನಾ ವೆಚ್ಚದಲ್ಲಿ ಹೆಚ್ಚುವರಿಯಾಗಿರುತ್ತದೆ.<br><br>ನಿಗಮದ ವರದಿಯಂತೆ, 2023-24ನೇ ಸಾಲಿನ ದರಪಟ್ಟಿಯನ್ವಯ ರೂ.3519.21 ಕೋಟಿ ಅಂದಾಜು ಮೊತ್ತದ ಪರಿಷ್ಕೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದ್ದು, ನಿಗಮ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.<br><br>ಸದರಿ ಪರಿಷ್ಕೃತ ಅಂದಾಜು ಮೊತ್ತವು ಈ ಹಿಂದೆ ಅಂದರೆ 2004ರಲ್ಲಿ ಚಾಲ್ತಿಯಲ್ಲಿದ್ದ ದರಪಟ್ಟಿಯಂತೆ ಅನುಮೋದನೆಗೊಂಡಿರುವ ಪರಿಷ್ಕೃತ ಮೊತ್ತ ರೂ.569.53 ಕೋಟಿಗಳಿಗೆ ಹೋಲಿಸಿದಾಗ ಸುಮಾರು 6 ಪಟ್ಟು ಹೆಚ್ಚಾಗಿರುತ್ತದೆ.<br><br>ಪ್ರಸ್ತುತ, ಸದರಿ ಯೋಜನೆಯಡಿ ವಾರಾಹಿ ಡೈವರ್ಶನ್ ವಿಯರ್, ವಾರಾಹಿ ಬಲದಂಡೆ ಸಾಮಾನ್ಯ ಕಾಲುವೆ 0.00 ರಿಂದ 18.725 ಕಿ.ಮೀ, ಎಡದಂಡೆ ಕಾಲುವೆ 0.00 ರಿಂದ 43.694 ಕಿ.ಮೀ. ಕಾಮಗಾರಿಗಳು ಪೂರ್ಣಗೊಂಡಿದ್ದು, 6155 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. ಯೋಜಿತ ಅಚ್ಚುಕಟ್ಟು 15702 ಹೆಕ್ಟೇರ್ ಪ್ರದೇಶಕ್ಕೆ ಹೋಲಿಸಿದಾಗ ಸುಮಾರು ಶೇ. 40 ರಷ್ಟು ನೀರಾವರಿ ಸಾಮರ್ಥ್ಯವನ್ನು ಸೃಜಿಸಲಾಗಿರುತ್ತದೆ.<br><br>ವಾರಾಹಿ ಎಡದಂಡೆ ನಾಲಾ ವಿತರಣಾ ನಾಲಾ ಕಾಮಗಾರಿ ಹಾಗೂ ವಾರಾಹಿ ಏತ ನೀರಾವರಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. |
| ಈ) | ಸಂಪನ್ಮೂಲ ಕೊರತೆಯ ಹಿನ್ನೆಲೆಯಲ್ಲಿ ಮತ್ತು ವಾರಾಹಿ ಯೋಜನೆಯು ಬ್ರಹ್ಮಾವರ ಸಕ್ಕರೆ ಕಾರ್ಖಾನೆಯ ಅಭಿವೃದ್ಧಿಗೆ ಪೂರಕವಾಗಿ ಉದ್ದೇಶಿಸಲಾಗಿತ್ತಾದರೂ ಯೋಜನೆಯ ಅನುಷ್ಠಾನದ ತಡವಾಗುವಿಕೆ ಸಕ್ಕರೆ ಕಾರ್ಖಾನೆಯ ಮುಚ್ಚುವಿಕೆಗೆ ಕಾರಣವಾಗಿರುವುದರಿಂದ ಪರಿಷ್ಕೃತ ಯೋಜನಾ ವರದಿಯಲ್ಲಿ ಉಲ್ಲೇಖಿಸಿರುವ ಹೆಚ್ಚುವರಿ ವಿಸ್ತರಣಾ ಕಾಮಗಾರಿಗಳನ್ನು ಮೊಟಕುಗೊಳಿಸಿ ಯೋಜನೆಯನ್ನು ಮುಕ್ತಾಯಗೊಳಿಸಲು ಕ್ರಮವಹಿಸುವ ಬಗ್ಗೆ ಸರ್ಕಾರದ ನಿಲುವೇನು? | ಈ ಯೋಜನೆಯಡಿ ವಾರಾಹಿ ಡೈವರ್ಶನ್ ವಿಯರ್, ವಾರಾಹಿ ಬಲದಂಡೆ ಸಾಮಾನ್ಯ ಕಾಲುವೆ, ಎಡದಂಡೆ ಕಾಲುವೆ ಪೂರ್ಣಗೊಳಿಸಲಾಗಿದ್ದು, ಸಾಮಾನ್ಯ ಕಾಲುವೆ ಚೈ.18.725 ನಂತರದ ಬಲದಂಡೆ ಕಾಲುವೆ ಇದೂವರೆಗೆ ಕೈಗೆತ್ತಿಕೊಂಡಿರುವುದಿಲ್ಲ.<br><br>ವಾರಾಹಿ ಬಲದಂಡೆ ಕಾಲುವೆಯ ಮೂಲ ಸರಪಳಿ 18.419 ಕಿ.ಮೀ. ರಿಂದ 42.73 ಕಿ.ಮೀ. ವರೆಗಿನ ನಾಲಾ ಪಂಕ್ತೀಕರಣವು ಆಳ ಅಗೆತವನ್ನು ಹೊಂದಿದ್ದು, ರಕ್ಷಿತ ಅರಣ್ಯ ಮತ್ತು ಡೀಮ್ಡ್ ಅರಣ್ಯ ಪ್ರದೇಶಗಳ ಮೂಲಕ ಹಾದುಹೋಗುತ್ತದೆ. ಸದರಿ ನಾಲೆಯಡಿ 1800 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿರುತ್ತದೆ.<br><br>ಅರಣ್ಯ ಭೂಮಿ ಬಿಡುಗಡೆ ಸಮಸ್ಯೆಯನ್ನು ತಪ್ಪಿಸುವ ನಿಟ್ಟಿನಲ್ಲಿ, ಅಚ್ಚುಕಟ್ಟು ಪ್ರದೇಶದಲ್ಲಿ ಯಾವುದೇ ವ್ಯತ್ಯಾಸವಿಲ್ಲದೇ ಬಲದಂಡೆ ನಾಲಾ ಪಥವನ್ನು ಬದಲಾಯಿಸಿ, ಪರಿಷ್ಕೃತ ಅಂದಾಜು ಪಟ್ಟಿಯನ್ನು ಚಾಲ್ತಿಯಲ್ಲಿರುವ 2023-24ನೇ ಸಾಲಿನ ಏಕರೂಪ ದರಪಟ್ಟಿಯನ್ವಯ ಸಿದ್ಧಪಡಿಸಲಾಗಿದ್ದು, ತಾಂತ್ರಿಕ ಹಾಗೂ ಆರ್ಥಿಕ ಕಾರ್ಯಸಾಧ್ಯತೆ ಕುರಿತು ಕರ್ನಾಟಕ ನೀರಾವರಿ ನಿಗಮದಲ್ಲಿ ಪರಿಶೀಲಿಸಲಾಗುತ್ತಿದೆ. |

**ಜಸಂಇ 154 ಎಂಎಲ್ಎ 2025**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿ**